ಶುಕ್ರವಾರ, 6 ಜುಲೈ 2018 | ಪುಟಗಳು: 14+6+6(PTR,UDP4) | ಬೆಲೆ: ₹ 5.00
www.vijaykarnataka.com
ಸಂಪುಟ: 17 | ಸಂಚಿಕೆ: 341
ಮಂಗಳೂರು | ಬೆಂಗಳೂರು | ಮೈಸೂರು | ಶಿವಮೊಗ್ಗ | ಹುಬ್ಬಳ್ಳಿ | ಬಾಗಲಕೋಟ | ಕಲಬುರಗಿ
VK
ವಿಜಯ ಕರ್ನಾಟಕ



## ಎಂಜಿನಿಯರಿಂಗ್ ಪ್ರವೇಶ ಶುಲ್ಕ ಶೇ. 10, ವೈದ್ಯ ಶುಲ್ಕ ಶೇಕಡಾ 8 ಹೆಚ್ಚಳಕ್ಕೆ ಸಮ್ಮತಿ

# ಆಪ್ಷನ್ ಎಂಟ್ರಿ ಬಿಕ್ಕಟ್ಟು ಅಂತ್ಯ

**ವಿಕ ಸುದ್ದಿಲೋಕ** ಬೆಂಗಳೂರು

ವೃತ್ತಿಪರ ಕೋರ್ಸ್‌ಗಳ ಪ್ರವೇಶ ಶುಲ್ಕ ನಿಗದಿಗೆ ಸಂಬಂಧಿಸಿದಂತೆ ರಾಜ್ಯ ಸರಕಾರ ಹಾಗೂ ಖಾಸಗಿ ವೃತ್ತಿಪರ ಶಿಕ್ಷಣ ಸಂಸ್ಥೆಗಳ ನಡುವಿನ ತಿಕ್ಕಾಟಕ್ಕೆ ಕೊನೆಗೂ ತೆರೆ ಬಿದ್ದಿದೆ. ಎಂಜಿನಿಯರಿಂಗ್ ಪ್ರವೇಶ ಶುಲ್ಕವನ್ನು ಶೇ. 10 ಹಾಗೂ ವೈದ್ಯ ಕೋರ್ಸ್‌ಗಳ ಶುಲ್ಕವನ್ನು ಶೇ. 8ರಷ್ಟು ಹೆಚ್ಚಿಸಲು ಸಮ್ಮತಿಸಲಾಗಿದೆ.

ಇದರಿಂದಾಗಿ, ವೈದ್ಯ ಹಾಗೂ ಎಂಜಿನಿಯರಿಂಗ್ ಕೋರ್ಸ್‌ಗಳ ಪ್ರವೇಶಕ್ಕಾಗಿ ಪರಿತಪಿಸುತ್ತಿದ್ದ ಲಕ್ಷಾಂತರ ವಿದ್ಯಾರ್ಥಿಗಳು ನೆಮ್ಮದಿಯ ನಿಟ್ಟುಸಿರು ಬಿಡುವಂತಾಗಿದೆ. ರಾಜ್ಯ ಸರಕಾರ ಖಾಸಗಿ ಕಾಲೇಜುಗಳಲ್ಲಿನ ಸರಕಾರಿ ಕೋಟಾದ ಸೀಟುಗಳ ಹಂಚಿಕೆ ಪಟ್ಟಿ ನೀಡಿದಲ್ಲಿ ಒಂದೆರಡು ದಿನಗಳಲ್ಲೇ ಆಪ್ಷನ್ ಎಂಟ್ರಿಗೆ ಅವಕಾಶ ಕಲ್ಪಿಸಲಾಗುವುದು ಎಂದು ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ಅಧಿಕಾರಿಗಳು ತಿಳಿಸಿದ್ದಾರೆ. »07

### ಶುಲ್ಕ ಹೆಚ್ಚಳ ಎಷ್ಟು?

- ಖಾಸಗಿ ಎಂಜಿನಿಯರಿಂಗ್ ಕಾಲೇಜುಗಳಲ್ಲಿನ ಸರಕಾರಿ ಕೋಟಾದ ಸೀಟುಗಳ ಪ್ರವೇಶ ಶುಲ್ಕ 65,000 ರೂ.ಗಳಿದ್ದು, ಶೇ. 10ರಷ್ಟು ಶುಲ್ಕ ಹೆಚ್ಚಳದಿಂದ 71,500 ರೂ.ಗೆ ಏರಿದೆ.
- ವೈದ್ಯಕೀಯ ಕೋರ್ಸ್‌ಗಳ ಶುಲ್ಕ ಶೇ. 8ರಷ್ಟು ಏರಿಕೆಯಾಗಲಿದೆ. 2017-18ರಲ್ಲಿದ್ದ 77,000 ರೂ. ಈ ವರ್ಷ 83,160 ರೂ. ನಿಗದಿಯಾಗಲಿದೆ.
- ಖಾಸಗಿ ವೈದ್ಯ ಕಾಲೇಜುಗಳಲ್ಲಿ ಇನ್‌ಸ್ಟಿಟ್ಯೂಷನಲ್ ಕೋಟಾದ ಸೀಟುಗಳ ಪ್ರವೇಶ ಶುಲ್ಕ 6.32 ಲಕ್ಷ ರೂ.ಗಳಷ್ಟಿದ್ದು, ಈ ವರ್ಷ 50,560 ರೂ. ಏರಿಕೆಯಾಗಲಿದೆ. ವಿದ್ಯಾರ್ಥಿಗಳು 6,82,560 ರೂ. ಶುಲ್ಕ ಭರಿಸಬೇಕಾಗುತ್ತದೆ.


ಶುಕ್ರವಾರ 6.7.2018
• ಬೆಂಗಳೂರು • ಬೆಳಗಾವಿ • ಶಿವಮೊಗ್ಗ
• ಹುಬ್ಬಳ್ಳಿ • ಮಂಗಳೂರು • ಕಲಬುರಗಿ
ಸಂಪುಟ 52 • ಸಂಚಿಕೆ 186 • ಪುಟ 16+4+8 • ಬೆಲೆ ₹5
epaper.kannadaprabha.in

ಕನ್ನಡಪ್ರಭ
ನೇರ.ದಿಟ್ಟ.ನಿರಂತರ

₹218488 ಕೋಟಿ ಬಜೆಟ್

ವಿವಿಧ ಜಿಲ್ಲೆಗೆ ಮು
ಕುಮಾರಸ್ವಾಮಿ ಕೊಟ್ಟ

ಬ್ರದರ್ ಎಚ್.ಡಿ.ಕುಮಾ
ಮನ್ನಾ
ಬ್ರದರ್ ಎಂದೇ ಖ್ಯಾತ
ಮೈತ್ರಿ ಸರ್ಕಾರದಲ್ಲಿ ಆ
ಮನ್ನಾವನ್ನು ಯಶಸ್ವಿ
ರೈತರ 'ಮನ್ನಾ



# ಎಂಜಿನಿಯರಿಂಗ್ ಶುಲ್ಕ ಶೇ.10 ಹೆಚ್ಚಳಕ್ಕೆ ನಿರ್ಧಾರ

## ಸರ್ಕಾರ–ಖಾಸಗಿ ಶಿಕ್ಷಣ ಸಂಸ್ಥೆಗಳ ಒಮ್ಮತ

• **ಕನ್ನಡಪ್ರಭ ವಾರ್ತೆ** ಬೆಂಗಳೂರು

ಎಂಜಿನಿಯರಿಂಗ್ ಕೋರ್ಸ್‌ಗಳಿಗೆ ಪ್ರಸಕ್ತ ಸಾಲಿನಲ್ಲಿ ಶೇ.10ರಷ್ಟು ಶುಲ್ಕ ಹೆಚ್ಚಳ ಮಾಡಲು ಗುರುವಾರ ನಡೆದ ಸರ್ಕಾರ ಮತ್ತು ಖಾಸಗಿ ಶಿಕ್ಷಣ ಸಂಸ್ಥೆಗಳ ಸಭೆಯಲ್ಲಿ ತೀರ್ಮಾನ ಕೈಗೊಳ್ಳಲಾಗಿದೆ.

ಸರ್ಕಾರಿ, ಮ್ಯಾನೇಜ್‌ಮೆಂಟ್ ಮತ್ತು ಎನ್‌ಆರ್‌ಐ ಕೋಟಾ ಸೀಟುಗಳಿಗೂ ಶೇ.10ರಷ್ಟು ಹೆಚ್ಚಳಕ್ಕೆ ಒಪ್ಪಿಗೆನೀಡಲಾಗಿದೆ. ಸದ್ಯ 65 ಸಾವಿರ ಶುಲ್ಕವಿದ್ದು, ಶೇ.10ರಷ್ಟು ಹೆಚ್ಚಳದಿಂದ 71,500 ಶುಲ್ಕವಾಗಲಿದೆ. ಕಳೆದ ಮೂರು ವರ್ಷಗಳಿಂದ ಶುಲ್ಕ ಹೆಚ್ಚಳ ಮಾಡಿಲ್ಲ, ಹೀಗಾಗಿ, ಕನಿಷ್ಠ ಶೇ.15ರಿಂದ 30ರಷ್ಟು ಹೆಚ್ಚಳ ಮಾಡಬೇಕು ಎಂದು ಖಾಸಗಿ ಕಾಲೇಜುಗಳು ಪಟ್ಟು ಹಿಡಿದಿದ್ದವು. ಸರ್ಕಾರ ಮತ್ತು ಖಾಸಗಿ ಕಾಲೇಜುಗಳ ನಡುವೆ ಹೊಂದಾಣಿಕೆಯಾಗದ ಹಿನ್ನೆಲೆಯಲ್ಲಿ ಅಂತಿಮವಾಗಿ ಶೇ.10 ಹೆಚ್ಚಳಕ್ಕೆ ಒಪ್ಪಿಕೊಳ್ಳಲಾಗಿದೆ ಎಂದು ಮೂಲಗಳು ತಿಳಿಸಿವೆ. ನ್ಯಾ. ಶೈಲೇಂದ್ರ ಕುಮಾರ್ ನೇತೃತ್ವದ ಶುಲ್ಕ ನಿಯಂತ್ರಣ ಸಮಿತಿಯು ಪ್ರತಿ ವರ್ಷ ಖಾಸಗಿ ಕಾಲೇಜುಗಳು ಶೇ.8 ರಷ್ಟು ಮಾತ್ರ ಶುಲ್ಕ ಹೆಚ್ಚಳ ಮಾಡಬೇಕು ಎಂಬ ಶಿಫಾರಸು ಮಾಡಿತ್ತು. ಆದರೂ ಶೇ.10ರಷ್ಟು ಹೆಚ್ಚಳಕ್ಕೆ ನಿರ್ಧರಿಸಲಾಗಿದೆ.

### ಇಂದು ಒಪ್ಪಂದ

ಅಧಿಕೃತವಾಗಿ ಶುಕ್ರವಾರ (ಜು.6) ಸರ್ಕಾರ ಮತ್ತು ಖಾಸಗಿ ಶಿಕ್ಷಣ ಸಂಸ್ಥೆಗಳು, ಅಲ್ಪಸಂಖ್ಯಾತ ಶಿಕ್ಷಣ ಸಂಸ್ಥೆಗಳನಡುವೆ ಒಪ್ಪಂದ ಮಾಡಿಕೊಳ್ಳಲಾಗುತ್ತದೆ. ಸರ್ಕಾರ ಸೀಟುಗಳನ್ನು ತಿಳಿಸಿದ ಬಳಿಕ ಕರ್ನಾಟಕ ಪರೀಕ್ಷಾ ಪ್ರಾಧಿಕಾರವು ಎಂಜಿನಿಯರಿಂಗ್ ಸೀಟುಗಳ ಮ್ಯಾಟ್ರಿಕ್ಸ್ ಬಿಡುಗಡೆ ಮಾಡಲಿದೆ.

FOLLOW US:
thehindu.com
facebook.com/thehindu
twitter.com/the_hindu

FRIDAY, JULY 6, 2018

THE HINDU

INDIA'S NATIONAL NEWSPAPER SINCE 1878



ISRO carries out flight test of 'crew escape' technology
page 9



Lalu Prasad's sons put up united front at RJD foundation day event
page 12



Mukesh Ambani-led Reliance Jio to roll out JioGigaFiber on Aug. 15
page 15

Guido Pella claws b
to stun Cilic; Nadal,
Djokovic through
page 18

PRINTED AT · CHENNAI · COIMBATORE · BENGALURU · HYDERABAD · MADURAI · NOIDA · VISAKHAPATNAM · THIRUVANANTHAPURAM · KOCHI · VIJAYAWADA · MANGALURU · TIRUCHIRAPALLI · KOLKATA · HUBBALLI · MOHALI · MALAPPURAM · MUMBAI · TIR

# Engineering fees hiked by 10%

**STAFF REPORTER**
BENGALURU

Students applying for engineering courses in Karnataka will see a fee hike of 10% from that of the previous academic year. The decision was taken on Thursday after a meeting between private college managements and the State government.

Senior officials in the Higher Education Department said that fees for seats across all quotas will see a uniform 10% hike. However, managements of several private engineering colleges are not happy. "College managements had actually sought a 20% hike in fee structure, but the government has agreed to cap it at 10%. A consensual agreement in this regard is likely to be signed on Friday itself," said a management member of a private engineering college. It has taken months for all parties to arrive at a consensual agreement. Retired Justice Shylendra Kumar, who heads the Fee Regulatory Committee, had capped the hike at 8% for professional courses.



BENNETT, COLEMAN & CO. LTD. | ESTABLISHED 1838 | TIMESOFINDIA.COM | EPAPER.TIMESOFINDIA.COM MANGALURU | THURSDAY, JULY 5, 2018 | PAGES 16 | PRICE ₹4.50

THE TIMES OF INDIA

# Engineering admissions not a priority for HDK govt?

## Fee Hike Row Holds Up Counselling

B V Shivashankar & Sunitha Rao R | TNN

### 2 rounds should've been over by now

While two rounds of CET counselling should have got over by July 5, the KEA is yet to take up the first round. All India Council of Technical Education norms say the process should be completed by July 28 and the class must start on August 1. Vinothpriya R, executive director, KEA, said she is hoping the issue would be resolved soon.

### Conflict: Ministers own engg colleges

With many politicians in the ruling party running engineering colleges, the conflict of interest is evident. Politicians owning engineering colleges include G Parameswara and DK Shivakumar, who holds the medical education portfolio. An activist said politicians donning dual roles are the main reason for the ongoing muddle over fee structure.

**Bengaluru:** With the Kumaraswamy government getting too busy with populist priorities and the bureaucracy reacting at snail's pace to anything non-budget, thousands of engineering aspirants in the state are staring at an uncertain future. The counselling-cum-admission process which should have started a week ago to facilitate commencement of classes from August, has been derailed as the state government and private college managements are yet to come to a consensus over fee hike.

While private managements have been demanding a 30% hike in fees, the government is looking at effecting a hike ranging from 5% to 8%. The deadlock has only increased students' frustration.

The Karnataka Examinations Authority (KEA) was supposed to complete the first round of online counselling for CET quota by June end, but the process is still to take off as the government is yet to announce a full seat matrix (college-wise seat availability).

▶Continued on page 5



BENNETT, COLEMAN & CO. LTD. | ESTABLISHED 1838 | TIMESOFINDIA.COM | EPAPER.TIMESOFINDIA.COM MANGALURU | THURSDAY, JULY 5, 2018 | PAGES 16 | PRICE ₹4.50

THE TIMES OF INDIA

# 'Pvt colleges under pressure to hike salaries of their staff'

▶**Continued from page 1**

The document-verification round went smooth. But ever since, we have been waiting for the government to announce the complete seat matrix," said Vinothpriya R, executive director, KEA. On June 28, the department of higher education announced a truncated seat matrix where 12,586 engineering seats from 34 colleges were made available for students as against a total of around 58,000 seats. The KEA, however, couldn't begin counselling as seats from 216 colleges weren't included in this list.

"The schedule has gone awry and my career plan has turned topsy-turvy," said Manohar M , a seat aspirant whose documents were verified on June 12. "The government could have done better by intervening on time. Instead, we had to witness unfortunate developments such as the new higher education minister G T Deve Gowda hesitating to take responsibility. A lot of time got wasted," said a KEA official. Gowda, in fact, gave a new spin to the controversy by deciding to cap the fee hike at 5% (the fee fixation committee had suggested 8% hike) in order to help students. The move further angered private managements, most of which are headed by politicians, including ministers.

When TOI contacted Gowda, he said: "The government is clear about its stand on fee structure. We have made it clear that the fee shouldn't be hiked beyond 5%. I hope they'll fall in line." Gowda, who held a meeting with private college management representatives on Tuesday, claimed that a majority of colleges agreed to the 5% cap and that the government would soon enter into a consensual agreement with all the colleges, following which the complete seat matrix will be released.

Private colleges, however, sought to spike the minister's claim, saying they never agreed to the government's fee structure. "There is no question of agreeing to a 5% hike. While the Fee Regulatory Committee has fixed 8% hike, which itself we think is low, the government wants to bring it down further. We appeal to the government to consider the issues on realistic grounds and decide the fee structure," said M K Panduranga Setty, secretary of Karnataka Unaided Private Engineering Colleges' Association (KUPECA).

Setty sought to point out that private colleges have come under pressure to hike salaries of their staff in the wake of the state government recently hiking salaries of its employees by 30%. "If not 30%, the government must consider at least a 15% hike. We are waiting for a positive response from the government and I hope the issue will be resolved in a week's time," he said.

ಗುರುವಾರ, 5 ಜುಲೈ 2018 | ಪುಟಗಳು: 10+4+4 | ಬೆಲೆ: ₹ 5.00
www.vijaykarnataka.com
ಸಂಪುಟ: 17 | ಸಂಚಿಕೆ: 340
VK
ವಿಜಯ ಕರ್ನಾಟಕ
ಮಂಗಳೂರು | ಬೆಂಗಳೂರು | ಮೈಸೂರು | ಶಿವಮೊಗ್ಗ | ಹುಬ್ಬಳ್ಳಿ | ಬಾಗಲಕೋಟ | ಕಲಬುರಗಿ



ಸೋನಾಲಿ ಬೇಂದ್ರೆಗೆ ಕ್ಯಾನ್ಸರ್: ಉಳಿವಿಗಾಗಿ ಹೋರಾಡುವೆ ಎಂದ ಬಾಲಿವುಡ್ ನಟಿ P10

ದಿಲ್ಲಿ ಆಡಳಿತ ಜಟಾಪಟಿ: ಕೇಜ್ರಿವಾಲ್‌ಗೆ ಅರ್ಧ ಗೆಲುವಿನ ಖುಷಿ; ಲೆ.ಗವರ್ನರ್ ಅಧಿಕಾರ ವ್ಯಾಪ್ತಿಗೆ ಸುಪ್ರೀಂ ಲಕ್ಷ್ಮಣ ರೇಖೆ P10



ಇಂಗ್ಲೆಂಡ್ ವಿರುದ್ಧ ಮೊದಲ ಟಿ20 ಪಂದ್ಯ: ಭಾರತಕ್ಕೆ 8 ವಿಕೆಟ್‌ಗಳ ಭರ್ಜರಿ ಜಯ P09

# ಸೀಟು ಹಂಚಿಕೆ ವಿಳಂಬ ಆತಂಕದಲ್ಲಿ ವಿದ್ಯಾರ್ಥಿಗಳು

**ಬೆಂಗಳೂರು:** ವೃತ್ತಿಪರ ಶಿಕ್ಷಣ ಕೋರ್ಸ್‌ಗಳ ಪ್ರವೇಶ ಶುಲ್ಕದ ವಿವಾದ ಬಗೆಹರಿಯದ ಕಾರಣ, ಖಾಸಗಿ ಕಾಲೇಜುಗಳಲ್ಲಿ ಸರಕಾರಿ ಸೀಟುಗಳ ಹಂಚಿಕೆ ಪ್ರಕ್ರಿಯೆ ನನೆಗುದಿಗೆ ಬಿದ್ದಿದೆ. ಸೀಟು ಆಯ್ಕೆಗಾಗಿ ಕಾದಿರುವ ಲಕ್ಷಾಂತರ ವಿದ್ಯಾರ್ಥಿಗಳು ಹಾಗೂ ಪೋಷಕರು ಆತಂಕಕ್ಕೊಳಗಾಗಿದ್ದಾರೆ.

ವೃತ್ತಿಪರ ಕೋರ್ಸ್‌ಗಳಿಗೆ ಪ್ರವೇಶ ಕಲ್ಪಿಸುವ ನಾನಾ ಪ್ರವೇಶ ಪರೀಕ್ಷೆಗಳ ಫಲಿತಾಂಶ ಹೊರಬಿದ್ದು ತಿಂಗಳು ಕಳೆದಿದೆ. ದಾಖಲೆಗಳ ಪರಿಶೀಲನೆ ಹೊರತುಪಡಿಸಿ ಇದುವರೆಗೆ ಬೇರೆ ಯಾವುದೇ ಪ್ರಕ್ರಿಯೆಗಳು ಪ್ರಾರಂಭವಾಗಿಲ್ಲ. ಇದುವರೆಗೆ ಕೇವಲ 32 ಎಂಜಿನಿಯರಿಂಗ್ ಕಾಲೇಜುಗಳಿಗಷ್ಟೇ ಸೀಟು ಹಂಚಿಕೆ ಮಾಡಲಾಗಿದೆ. ಪ್ರತಿಷ್ಠಿತ ಖಾಸಗಿ ಕಾಲೇಜಗಳಲ್ಲಿ ಲಭ್ಯವಿರುವ ಸೀಟುಗಳ ಪಟ್ಟಿಯನ್ನು ಪ್ರಕಟ ಮಾಡದ ಕಾರಣ, ವಿದ್ಯಾರ್ಥಿಗಳು ತಾವು ಇಚ್ಛಿಸಿದ ಕಾಲೇಜುಗಳನ್ನು ಆಯ್ಕೆ ಮಾಡಿಕೊಳ್ಳಲು ಸಮಸ್ಯೆ ಎದುರಾಗಿದೆ.

ರಾಜ್ಯ ಸರಕಾರ ಪ್ರಸ್ತುತ ಸರಕಾರಿ ಕಾಲೇಜುಗಳ ಶುಲ್ಕವನ್ನು ಮಾತ್ರ ಅಂತಿಮಗೊಳಿಸಿದೆ. ಆದರೆ ಖಾಸಗಿ ಕಾಲೇಜುಗಳ ಶುಲ್ಕ ನಿಗದಿಯಾಗದೆ ಸರಕಾರ ಕೂಡ ಹೆಚ್ಚಿನ ಕಾಲೇಜುಗಳಲ್ಲಿ ಸೀಟುಗಳನ್ನು ಹಂಚಿಕೆ ಮಾಡಲಾಗುತ್ತಿಲ್ಲ.

ವೇಳಾಪಟ್ಟಿಯಂತೆ ಸೀಟುಗಳ ಹಂಚಿಕೆ ಪ್ರಕ್ರಿಯೆನ್ನು ನಡೆಸಲು ಕರ್ನಾಟಕ ಪರೀಕ್ಷಾ ಪ್ರಾಧಿಕಾರಕ್ಕೂ ಸಮಸ್ಯೆಯಾಗಿದೆ. ಹಾಗಾಗಿ ಸೀಟುಗಳು ಹಂಚಿಕೆಯಾಗಿರಬಹುದು ಎಂಬ ನಿರೀಕ್ಷೆಯಲ್ಲಿ ಪ್ರತಿನಿತ್ಯ ಪ್ರಾಧಿಕಾರದ ವೆಬ್‌ಸೈಟ್‌ಗೆ ಇಣುಕಿ ನೋಡುವ ವಿದ್ಯಾರ್ಥಿಗಳು ನಿರಾಸೆಗೊಳಗಾಗುತ್ತಿದ್ದಾರೆ.

**ತೊಂದರೆಯೇನು?:** ಜುಲೈ 31ರೊಳಗೆ ಎಂಜಿನಿಯರಿಂಗ್ ಸೇರಿದಂತೆ ನಾನಾ ವೃತ್ತಿಪರ ಕೋರ್ಸ್‌ಗಳ ಪ್ರವೇಶ ಪ್ರಕ್ರಿಯೆಯನ್ನು ಕರ್ನಾಟಕ ಪರೀಕ್ಷಾ ಪ್ರಾಧಿಕಾರ ಮುಗಿಸಬೇಕು. ಜುಲೈ ಮೊದಲ ವಾರದೊಳಗೆ ಮೊದಲ ಸುತ್ತಿನ ಸೀಟುಗಳ ಹಂಚಿಕೆ ಪೂರ್ಣಗೊಳ್ಳಬೇಕಿತ್ತು. ಆದರೆ ಇದುವರೆಗೆ ಆ ಪ್ರಕ್ರಿಯೆ ನಡೆದಿಲ್ಲ. ಹಾಗಾಗಿ ಉಳಿದ ಮೂರು ವಾರಗಳಲ್ಲಿ ಮೂರು ಸುತ್ತಿನ ಸೀಟುಗಳ ಹಂಚಿಕೆ ಪ್ರಕ್ರಿಯೆ ಮುಗಿಸಬೇಕಿದೆ. ಸಮಯಾವಕಾಶ ಕಡಿಮೆಯಿರುವ ಕಾರಣ, ವಿದ್ಯಾರ್ಥಿಗಳು ಎರಡನೇ ಸುತ್ತಿನಲ್ಲಿ ಇಷ್ಟದ ಕಾಲೇಜಿನಲ್ಲಿ ಸೀಟುಗಳು ಲಭ್ಯವಾಗುವವರೆಗೆ ಕಾಯದೆ, ಮೊದಲ ಸುತ್ತಿನಲ್ಲಿ ಸೀಟು ಲಭ್ಯವಾದ ಕಾಲೇಜಿಗೆ ಅನಿವಾರ್ಯವಾಗಿ ದಾಖಲಾಗುವ ಪರಿಸ್ಥಿತಿ ಎದುರಾಗಲಿದೆ. ಇದರಿಂದ ವಿದ್ಯಾರ್ಥಿಗಳು ಕಾಲೇಜುಗಳ ಆಯ್ಕೆಯ ಒತ್ತಡಕ್ಕೆ ಸಿಲುಕಲಿದ್ದಾರೆ.

ಸಾಮಾನ್ಯವಾಗಿ ಕೆಲವು ವಿದ್ಯಾರ್ಥಿಗಳು ವೈದ್ಯ ಹಾಗೂ ದಂತ ವೈದ್ಯ ವಿಭಾಗದಲ್ಲಿ ರ್‍ಯಾಂಕಿಂಗ್ ಪಡೆದಿದ್ದರೂ, ಮುನ್ನೆಚ್ಚರಿಕೆ ಕ್ರಮವಾಗಿ ಎಂಜಿನಿಯಿರಿಂಗ್ ಸೀಟುಗಳನ್ನು ಆಯ್ಕೆ ಮಾಡಿಕೊಳ್ಳುತ್ತಾರೆ.

ವೈದ್ಯ ಸೀಟು ಗಳು ಲಭ್ಯವಾದ ತಕ್ಷಣ, ಈ ಹಿಂದೆ ಆಯ್ಕೆ ಮಾಡಿಕೊಂಡಿದ್ದ ಎಂಜಿನಿಯರಿಂಗ್ ಸೀಟು ಗಳು ಖಾಲಿ ಉಳಿಯಲಿವೆ. ಇದರಿಂದ ಪ್ರತಿ ಭಾನ್ವಿತ ಎಂಜಿನಿಯರಿಂಗ್ ವಿದ್ಯಾರ್ಥಿಗಳು ತಮ್ಮ ಇಷ್ಟದ ಎಂಜಿನಿಯರಿಂಗ್ ಕಾಲೇಜುಗಳಲ್ಲಿ ಸೀಟು ಪಡೆಯುವಲ್ಲಿ ವಿಫಲರಾಗುತ್ತಾರೆ.

- ಮುಂದುವರಿದ ವೃತ್ತಿಪರ ಕಾಲೇಜು ಪ್ರವೇಶ ಶುಲ್ಕ ವಿವಾದ
- ಕಾಲೇಜುಗಳಲ್ಲಿ ಲಭ್ಯವಿರುವ ಸೀಟುಗಳನ್ನು ಪ್ರಕಟಿಸದ ಕೆಇಎ
- 8%ರಷ್ಟು ಶುಲ್ಕ ಹೆಚ್ಚಳವನ್ನು ತಿರಸ್ಕರಿಸಿದ ಖಾಸಗಿ ಕಾಲೇಜುಗಳು

**ವೃತ್ತಿಪರ ಶಿಕ್ಷಣ ಕೋರ್ಸ್ ಪ್ರವೇಶ ಶುಲ್ಕ ವಿವಾದ ಬಗೆಹರಿಸಲು ಕ್ರಮ ಕೈಗೊಳ್ಳುತ್ತಿದ್ದೇವೆ. ಒಂದೆ ರಡು ದಿನಗಳಲ್ಲಿ ಸಮಸ್ಯೆ ಪರಿಹಾರವಾಗಲಿದೆ.**

**-ಡಿ.ಕೆ.ಶಿವಕುಮಾರ್**
ವೈದ್ಯ ಶಿಕ್ಷಣ ಸಚಿವ

**ಸರಕಾರ ಮತ್ತು ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ನಿರ್ಲಕ್ಷ್ಯದಿಂದ ಅಮಾಯಕ ವಿದ್ಯಾರ್ಥಿಗಳು ಪರದಾಡುವಂತಾಗಿದೆ. ಶುಲ್ಕ ಹೆಚ್ಚಳಕ್ಕೆ ಸಂಬಂಧಿಸಿದಂತೆ ಖಾಸಗಿ ಕಾಲೇಜುಗಳ ಲಾಬಿಗೆ ಸರಕಾರ ಮಣಿದಿದ್ದು, ಈ ಸಂಬಂಧ ಉನ್ನತ ಶಿಕ್ಷಣ ಸಚಿವರು ಪ್ರತಿಕ್ರಿಯಿಸಿಲ್ಲ. ಕೂಡಲೇ ಸರಕಾರ ಸಮಸ್ಯೆಯನ್ನು ಪರಿಹರಿಸಬೇಕು. ತಪ್ಪಿದರೆ ರಾಜ್ಯಾದ್ಯಂತ ಉಗ್ರ ಹೋರಾಟ ನಡೆಸಲಾಗುವುದು.**

- **ಹರ್ಷ ನಾರಾಯಣ್**, ರಾಜ್ಯ ಕಾರ್ಯದರ್ಶಿ, ಎಬಿವಿಪಿ.

## ಕಾರಣವೇನು?

**ವೃತ್ತಿಪರ ಕೋರ್ಸ್‌ಗಳ ಪ್ರವೇಶ ಶುಲ್ಕವನ್ನು ಶೇ.8 ರಷ್ಟು ಹೆಚ್ಚಳ ಮಾಡಲು ಸರಕಾರ ಮುಂದಾಗಿದೆ. ಆದರೆ ಖಾಸಗಿ ವೃತ್ತಿಪರ ಕಾಲೇಜುಗಳ ಆಡಳಿತ ಮಂಡಳಿಗಳು ಸರಕಾರದ ಪ್ರಸ್ತಾಪ ತಿರಸ್ಕರಿಸಿವೆ. ಇದು ವೃತ್ತಿಪರ ಕೋರ್ಸ್‌ಗಳ ಪ್ರವೇಶ ಪ್ರಕ್ರಿಯೆಗೆ ಅಡ್ಡಿಯಾಗಿದ್ದು, ಸೀಟುಗಳ ಹಂಚಿಕೆಯಾಗದಿರಲು ಪ್ರಮುಖ ಕಾರಣವಾಗಿದೆ. ಪ್ರಾಧ್ಯಾಪಕರ ವೇತನ ಹಾಗೂ ಇತರೆ ವೆಚ್ಚಗಳು ಭಾರಿ ಪ್ರಮಾಣದಲ್ಲಿ ಏರಿಕೆಯಾಗಿದ್ದು, ಆಡಳಿತ ಮಂಡಳಿಗೆ ಹೊರೆಯಾಗಿ ಪರಿಣಮಿಸಿದೆ. ಆದ್ದರಿಂದ ಸರಕಾರದ ಶುಲ್ಕ ಹೆಚ್ಚಳ ಪ್ರಸ್ತಾಪ ಒಪ್ಪಲು ಸಾಧ್ಯವಿಲ್ಲ ಎಂದು ಖಾಸಗಿ ಶಿಕ್ಷಣ ಸಂಸ್ಥೆಗಳು ಪಟ್ಟು ಹಿಡಿದಿವೆ. ಸರಕಾರ ಸಹ ತನ್ನ ಪಟ್ಟನ್ನು ಸಡಿಲಿಸದ ಹಿನ್ನೆಲೆಯಲ್ಲಿ ಸಮಸ್ಯೆ ಬಿಗಡಾಯಿಸಿದೆ.**